ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ 72ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ.

**ಸೂಚನೆ :**

ಉತ್ತರ ಕರ್ನಾಟಕ ಜನತೆಯ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಆ ಭಾಗದ ಜನರ ಸೇವೆಗೆ ಅನುಕೂಲವಾಗುವಂತೆ ಪ್ರಮುಖ ಇಲಾಖೆಗಳ ವಿಭಾಗೀಯ ಕಛೇರಿ ಹಾಗೂ ಪ್ರಾದೇಶಿಕ ಆಡಳಿತ ಕಛೇರಿಯ ನಿರ್ಮಾಣದ ಅಗತ್ಯತೆ ಹಾಗೂ ಸುವರ್ಣ ವಿಧಾನ ಸೌಧದ ಸಮಯೋಚಿತ ಸದ್ಬಳಕೆ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆದಿರುವ ಕುರಿತು.

**ಉತ್ತರ :**

ಸರ್ಕಾರದ ಅಧಿಸೂಚನೆ ಸಂಖ್ಯೆ: ಯೋಇ 75 ಯೋಪರ 2018 (ಭಾಗ-6), ದಿನಾಂಕ: 30.06.2020 (ಅನುಬಂಧ-1 ಮತ್ತು 2) ರನ್ವಯ ಬೆಳಗಾವಿಯಲ್ಲಿನ ಖಾಸಗಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕರ್ನಾಟಕ ಸರ್ಕಾರದ ವಿವಿಧ ಕಛೇರಿಗಳನ್ನು ಬೆಳಗಾವಿ ಸುವರ್ಣ ಸೌಧಕ್ಕೆ ಸ್ಥಳಾಂತರಿಸಿ ಆದೇಶಿಸಲಾಗಿದೆ. ಸದರಿ ಅಧಿಸೂಚನೆಯ ಅನುಬಂಧ-1ರಲ್ಲಿನ ಕ್ರಮ ಸಂಖ್ಯೆ 16ರಲ್ಲಿರುವ ಕರ್ನಾಟಕ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಆಟೋ ನಗರ, ಬೆಳಗಾವಿ, ಈ ಕಛೇರಿಯ ಬದಲಾಗಿ, ಶಿಶು ಅಭಿವೃದ್ಧಿ ಯೋಜನೆ ಕಛೇರಿ, ಬೆಳಗಾವಿ ಗ್ರಾಮೀಣ ಕಛೇರಿಯನ್ನು ತಿದ್ದೋಲೆ ಸಂಖ್ಯೆ : ಯೋಇ 75 ಯೋಪರ 2018 (ಭಾಗ-6), ದಿನಾಂಕ: 02.07.2020ರನ್ವಯ ಸ್ಥಳಾಂತರಿಸಲು ಆದೇಶಿಸಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಯೋಇ 75 ಯೋಪರ 2018 (ಭಾಗ-7), ದಿನಾಂಕ:21.09.2020ರನ್ವಯ ದಿನಾಂಕ:30.06.2020ರ ಅಧಿಸೂಚನೆಯ ಅನುಬಂಧ-2ರಲ್ಲಿರುವ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಒಳಪಡುವ ಧಾರವಾಡ ವಿಭಾಗೀಯ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಕಛೇರಿಯನ್ನು ಸುವರ್ಣ ಸೌಧ ಬೆಳಗಾವಿಗೆ ಸ್ಥಳಾಂತರಿಸುವ ಪ್ರಕ್ರಿಯೆಯನ್ನು ಹಿಂಪಡೆಯಲಾಗಿದೆ.

ಬೆಳಗಾವಿಯ ಸುವರ್ಣ ಸೌಧ ಕಟ್ಟಡವನ್ನು ಅಧಿವೇಶನವನ್ನು ಹೊರತುಪಡಿಸಿ, ರಾಜ್ಯ ಮಟ್ಟದ ಅಂದಾಜು ಸಮಿತಿ ಸಭೆ, ಕೃಷಿ ಪಂಡಿತ್ ಪ್ರಶಸ್ತಿ ಸಮಾರಂಭ, ರಾಜ್ಯ ಮಟ್ಟದ ಕೃಷಿ ಸಮ್ಮೇಳನ, ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಗುಟಕ ಮತ್ತು ತಂಬಾಕು ಉತ್ಪನ್ನಗಳ ನಿಷೇಧ ಕುರಿತಾಗಿ ವಲಯಮಟ್ಟದ ತರಬೇತಿ, ಕರ್ನಾಟಕ ವಿಧಾನ ಮಂಡಲದ ಮತ್ತು ಪಂಚಾಯತ್ ರಾಜ್ ಇಲಾಖೆಯ ವಲಯ ಮಟ್ಟದ ಸಮಿತಿಯ ಸಭೆ; ಉನ್ನತ ಶಿಕ್ಷಣ ಇಲಾಖೆಯ ಕಾಗದ ಪತ್ರಗಳ ಸಮಿತಿ ಸಭೆ; ಸಮಾಜ ಕಲ್ಯಾಣ ಇಲಾಖೆಯ ಅನುಸೂಚಿತ ಜಾತಿ ಮತ್ತು ಅನುಸೂಚಿತ

ಅಂಗಡಗಳ ಕಲ್ಯಾಣ ಸಮಿತಿ ಸಭೆ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ತಡೆಗಟ್ಟುವಿಕೆ ಹಾಗೂ ಅಸ್ಪೃಶ್ಯತೆ ನಿರ್ಮೂಲನೆ ಕುರಿತಾಗಿ ಜಿಲ್ಲಾ ಮಟ್ಟದ ವಿಚಾರಣ ಸಂಕೀರ್ಣ; ಕಂದಾಯ ಇಲಾಖೆಯ ಬೆಳಗಾವಿ ಹಾಗೂ ಗುಲ್ಬರ್ಗಾ ವಿಭಾಗ ಮಟ್ಟದ ಅಧಿಕಾರಿಗಳ ಸಭೆ; ಜಲಸಂಪನ್ಮೂಲ ಇಲಾಖೆಯ ಅಂದಾಜು ಸಮಿತಿ ಸಭೆ; ಲೋಕೋಪಯೋಗಿ ಇಲಾಖೆಯ ಬೆಳಗಾವಿ ವೃತ್ತದ ಪ್ರಗತಿ ಪರಿಶೀಲನಾ ಸಭೆ; ನಗರಾಭಿವೃದ್ಧಿ ಇಲಾಖೆ ಭರವಸೆ ಸಮಿತಿ ಸಭೆ; ಬೆಳಗಾವಿ ಜಿಲ್ಲೆಯ ವಕ್ಫ ಆಸ್ತಿಗಳ ಸಂರಕ್ಷಣೆಗಾಗಿ ಸಹಾಯಧನ ಒದಗಿಸುವ ಕುರಿತು ಸಭೆ; ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಲೆಕ್ಕಪರಿಶೀಲನಾ ಸಭೆ; ಪ್ರವಾಸೋದ್ಯಮ ಇಲಾಖೆಯ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವುದಕ್ಕೆ ಸಭೆ; ಜಿಲ್ಲಾ ಮಟ್ಟದ ಆಧಾರ ಕಾರ್ಯಾಗಾರ; ಮಾನವ ಹಕ್ಕುಗಳ ಅರಿವು ಜಾಗೃತ ಕಾರ್ಯಗಾರ; ಅರಣ್ಯೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರ್ಯಗಾರ; ಗ್ರಾಮ ಪಂಚಾಯತಿ ಚುನಾವಣಾ ಪೂರ್ವಸಿದ್ಧತೆ ಸಭೆ ಹಾಗೂ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಗಳನ್ನು ಸುವರ್ಣಸೌಧದ ಕಟ್ಟಡದಲ್ಲಿ ಜರುಗಿಸಿದ್ದು, ವರ್ಷ ಪೂರ್ತಿ ವಿವಿಧ ಚಟುವಟಿಕೆಗಳಿಗಾಗಿ ಸುವರ್ಣ ಸೌಧ ಕಟ್ಟಡವು ಸದ್ಬಳಕೆಯಾಗುತ್ತಿದೆ.

ಪ್ರಸ್ತುತ 22 ಸರ್ಕಾರಿ/ನಿಗಮದ ಕಛೇರಿಗಳನ್ನು ಸ್ಥಳಾಂತರಿಸಲಾಗಿದ್ದು, ಅವುಗಳು ಕಾರ್ಯ ನಿರ್ವಹಿಸುತ್ತಿವೆ.

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಹಿತದೃಷ್ಟಿಯಿಂದ ಪ್ರಸ್ತುತ ಜಿಲ್ಲಾವಾರು ಕಛೇರಿಗಳನ್ನು ಬೆಳಗಾವಿ ಸುವರ್ಣ ಸೌಧಕ್ಕೆ ಸ್ಥಳಾಂತರ ಮಾಡಿ, ಸದರಿ ಸುವರ್ಣ ಸೌಧದಲ್ಲಿ ಲಭ್ಯವಿರುವ ಸ್ಥಳಾವಕಾಶವನ್ನು ಸದ್ಬಳಕೆ ಮಾಡಿಕೊಳ್ಳಲಾಗಿದ್ದು, ಸಾರ್ವಜನಿಕ ಹಿತದೃಷ್ಟಿ ಹಾಗೂ ಆಡಳಿತ ಹಿತದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಪ್ರಮುಖ ಇಲಾಖೆಗಳ ವಿಭಾಗೀಯ ಕಛೇರಿ ಹಾಗೂ ಪ್ರಾದೇಶಿಕ ಆಡಳಿತ ಕಛೇರಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ(ಆಡಳಿತ ಸುಧಾರಣೆ) ವಿಭಾಗದ ಪರಿಶೀಲನೆಗೊಳಪಡಿಸಿ, ಅಗತ್ಯತೆ ಕಂಡುಬಂದಲ್ಲಿ ಸುವರ್ಣ ಸೌಧಕ್ಕೆ ಸ್ಥಳಾಂತರಿಸಲು ಸಾಧಕ ಬಾಧಕಗಳನ್ನು ಪರಿಶೀಲಿಸಲಾಗುವುದು.

ಸಂಖ್ಯೆ: ಪಿಡಿಎಸ್ 85 ಪಿಎಆರ್ ಐ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ